Selection of Jayanthi village

293 SRI P. M. BANGI (Jamkandi). [On behalf of SRI V. M. GHADI (Haliyal]) —Will the Minister for Rural Development and Panchayat Raj be pleased to state :—

(*a*) whether the Government has selected one village as 'Jayanthi Village' in each taluk;

(*b*) if so, the reasons for which a village has been selected;

(*c*) whether the purpose for which they were selected has been served;

(*d*) if not, the reasons ?

SRI K. PRABHAKAR (Minister for Rural Development and Panchayat Raj).—

(*a*) Yes.

(*b*) The most backward village in the Taluk in all respects *viz.*, Health, Education, Sanitation, Water Supply, Communication and where SCs/STs people are more, has been selected as a Jayanthi Village.

(*c*) Yes, the extent possible.

(*d*) In view of reply to (c) above this does not arise.

ಶ್ರೀ ಪಿ. ಎಂ. ಭಾಂಗಿ.—ಜಯಂತಿ ಗ್ರಾಮದಲ್ಲಿ ಕಟ್ಟಿರುವ ಕೆಲವು ಮನೆಗಳು ಬಿದ್ದು ಹೋಗಿವೆ. ಬಿದ್ದು ಹೋದ ಮನೆಗಳನ್ನು ಪುನಃ ಕಟ್ಟಿಸಿಕೊಟ್ಟರೂ ಯಾರು ಅಲ್ಲಿಗೆ ಹೋಗಿ ವಾಸ ಮಾಡಲಿಕ್ಕೆ ತಯಾರಿಲ್ಲ. ಜಮಖಂಡಿ ತಾಲ್ಲೂಕಿನ ಕೊಣ್ಣೂರು ಗ್ರಾಮದಲ್ಲಿ ಕಟ್ಟಲಾಗಿರುವ ಜಯಂತಿ ಗ್ರಾಮ ಗುಡ್ಡದ ಮೇಲಿದೆ. ಒಂದು ವರ್ಷದಲ್ಲೇ ಅಲ್ಲಿ ಕಟ್ಟಲಾಗಿರುವ ಮನೆಗಳು ಹಾಳಾಗಿ ಹೋಗಿವೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತೆ ಕೆಲವು ಜಯಂತಿ ಗ್ರಾಮಗಳಿಗೆ ರಸ್ತೆ, ಶಿಕ್ಷಣ ಮುಂತಾದ ಯಾವ ಸೌಕರ್ಯಗಳನ್ನೂ ಒದಗಿಸಿಕೊಟ್ಟಿಲ್ಲ. ಆದುದರಿಂದ ಯಾವ ಉದ್ದೇಶದ ಸಲುವಾಗಿ ಮನೆಗಳನ್ನು ಕಟ್ಟಲಾಯಿತೋ ಆದು ಈಡೇರಿಲ್ಲ. ಇದು ಮಂತ್ರಿಗಳ ಗಮನಕ್ಕೆ ಬಂದಿದೆಯೇ ? ಇನ್ನು ಮುಂದಾದರೂ ಜಯಂತಿ ಗ್ರಾಮಗಳಿಗೆ ಎಲ್ಲ ವಿಧವಾದ ಸೌಕರ್ಯಗಳನ್ನೂ ಒದಗಿಸಿ, ಆ ಗ್ರಾಮಗಳ ಉದ್ಧಾರ ಮಾಡುವುದಕ್ಕೆ ಪ್ರಯತ್ನ ಮಾಡುವಿರಾ ?

† ಶ್ರೀ ಕೆ. ಪ್ರಭಾಕರ್.—ಕೆಲವು ಗ್ರಾಮಗಳಲ್ಲಿ ಸರ್ಕಾರದ ನಿರೀಕ್ಷಣೆಯಿರುವಷ್ಟು ಮಟ್ಟಿಗೆ ಪ್ರಗತಿಯಾಗಿಲ್ಲ ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಇದು ಸಂಸ್ಥಾನಾಮಳಿ ಇರುವ ಪ್ರಗತಿದಾಯಕವಾದ ಯೋಜನೆ. ಎಲ್ಲೆಲ್ಲಿ ಅಗತ್ಯ ಸೌಕರ್ಯಗಳನ್ನು ಒದಗಿಸಿಲ್ಲ ಎಂಬುದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ, ಯಾವ ಗುರಿಯನ್ನು ಮುಟ್ಟಬೇಕೆಂದು ಸರ್ಕಾರದ ಉದ್ದೇಶ ವಿದೆಯೋ, ಅದನ್ನು ಬೇಗ ತಲುಪುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

ಶ್ರೀ ಪಿ. ಎಂ ಭಾಂಗಿ.—ಕೆಲವು ಕಡೆ ಜನಗಳಿಗೆ ಬೇಡವಾದ ಕಡೆಗಳಲ್ಲಿ ಜಯಂತಿ ಗ್ರಾಮಗಳ ನಿರ್ಮಾಣವಾಗಿದೆ. ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದು ಕೊಳ್ಳುತ್ತದೆಯೆ ?

ಶ್ರೀ ಕೆ. ಪ್ರಭಾಕರ್.—ಯೋಜನೆಯನ್ನು ಕಾರ್ಯಗತ ಮಾಡುವಾಗ ಉದ್ದೇಶಪೂರ್ವಕವಾಗಿ ತಪ್ಪು ಮಾಡಿದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೆ, ಅನಿವಾರ್ಯ ಕಾರಣ ಗಳಿಂದಾಗಿ ನ್ಯೂನತೆ ಉಂಟಾಗಿದ್ದರೆ ಅದನ್ನು ಸರ್ಕಾರ ಸರಿ ಮಾಡುತ್ತದೆ. ಆದರೆ, ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಕರ್ತವ್ಯಲೋಪ ಮಾಡಿದ್ದಾರೆಂದು ಸರ್ಕಾರಕ್ಕೆ ಗೊತ್ತಾದರೆ ಅವರಿಗೆ ಎಚ್ಚರಿಕೆಯನ್ನು ಕೊಟ್ಟಿಗೆ ಬದ್ಧರಾಗಿರಬೇಕು ಅಥವಾ ಯಾವ ರೀತಿಗೆ ತರಬೇಕು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಯವನ್ನು ಕೈಗೊಳ್ಳುತ್ತದೆ ಹಿಂದು ಮೇಲೆ ಅಧಿಕಾರಿಗಳು ತಪ್ಪು ಮಾಡಿಯೇ ಇದ್ದರೆ, ಅವರು ಕಷ್ಟಕ್ಕೀಡಾಗುವುದು ಅನಿವಾರ್ಯ ಆದುದರಿಂದ, ಸರ್ಕಾರ ಇವೆರಡನ್ನೂ ಪರಿಶೀಲಿಸಿ, ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಬಿ ಲಿಂಗಸ್ವಾಮಿ.—ಸ್ವಾಮಿ, ಯಾವ ಯಾವ ತಾಲ್ಲೂಕಿನಲ್ಲಿ ಈ ಯೋಜನೆಯನ್ನು ಪರಿಪೂರ್ಣವಾಗಿ ಕಾರ್ಯಗತ ಮಾಡಿದಾರೆ ? ಈ ವಿಷಯದಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಸರಿಯಾದ ಆದೇಶ ಕೊಟ್ಟಿದ್ದಾರೆಯೇ ? ಬೆಂಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಎಲ್ಲಾ ವಿಷಯಗಳಲ್ಲಿಯೂ 100ಕ್ಕೆ 100 ಭಾಗ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದವರನ್ನು ವರ್ಗ ಮಾಡುವಂತಹ ಕಾರಣ ಏನು ಇತ್ತು ?

ಶ್ರೀ ಕೆ. ಪ್ರಭಾಕರ್.—ಇದರಲ್ಲಿ ಮೂರು ಅಂಶಗಳನ್ನು ತಾವು ಮುಂದಿಟ್ಟಿದ್ದೀರಿ. ಬೆಂಗಳೂರು ಜಿಲ್ಲೆಯ ಪ್ರಗತಿಯ ವರದಿ ಈಗ ನನ್ನ ಮುಂದೆ ಇಲ್ಲ ; ಎಲ್ಲೆಲ್ಲಿ ಕಾರ್ಯ ನಡೆದಿಲ್ಲ ಆ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಲಿಲ್ಲವೆಂದು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಜಿಲ್ಲಾಧಿಕಾರಿಗಳ ಪ್ರಶ್ನೆಯನ್ನು ಏನು ಜೋಡಿಸುತ್ತಿದ್ದೀರಿ ಈ ಸಮಯ ಅದಕ್ಕೆ ಸಮಂಜಸವಲ್ಲ. ವರ್ಗ ಆದಾಗ, ಒಳ್ಳೆಯ ಕೆಲಸ ಮಾಡುತ್ತಿದ್ದವರು ವರ್ಗವಾಗುವುದು ಉಂಟು.

Construction of Harijan/Girijans' Hostel in Kollegal

350. SRI M. SIDDAMADAIAH (Kollegal).—Will the Minister for University Education and Wakfs be pleased to state :—

(*a*) whether it has come to the notice of the Government that there is no Hostel to the Harijan/Girijan students in Sree Mahadeswara College in Kollegal where the strength of Harijan/Girijan students is quite large ;

(*b*) if so, whether the Government intends to construct the Harijans/Girijans Hostel ?

SRI S. M. YAHYA (Minister for University Education and Wakfs)–

(*a*) There is a Harijan and Girijans' Hostel in Kollegal, run by a Private Institution.

(*b*) No.

ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ತಾವು ಏನೂ ಉತ್ತರ ಕೊಟ್ಟಿಲ್ಲ; ಇವತ್ತು ಕೊಳ್ಳೆಗಾಲದ ಶ್ರೀ ಮಹದೇಶ್ವರ ಕಾಲೇಜಿನಲ್ಲಿ ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳ ಸಂಖ್ಯೆ 310 ರಿಂದ 400ರವರೆಗೂ ಇದೆ. ಇವತ್ತು ಅಲ್ಲಿ ಒಂದು ಸರ್ಕಾರಿ ಕಟ್ಟಡ ಇಲ್ಲದೆ ಬಹಳ ತೊಂದರೆಯಾಗಿದೆ. ಈಗ ಹಾಲ್ ಖಾನಗಿಯವರ ಮನೆಯಲ್ಲಿ ಹಾಸ್ಟೆಲ್ ನಡೆಯುತ್ತಿದ್ದು ಸರ್ಕಾರ ಇತ್ತ ಕಡೆ ಗಮನಕೊಟ್ಟು ಒಂದು ಕಟ್ಟಡ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಿಕೊಡುತ್ತೀರಾ ?